ಶ್ರೀ ಎಂ. ನಾಗಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಲಾಗಿದೆ. ಆದರೆ ಗುರೆಡ್ಡಿಯವರು ಹಾಕಿರುವ 217ನೆ ಪ್ರಶ್ನೆಗೆ ಇನ್ನೂ ಇಲ್ಲ ಎಂದು ಉತ್ತರವಿದೆ. ಇದರಲ್ಲಿ ಯಾವುದು ಸರಿ ?

ಶ್ರಿ ವೀರೇಂದ್ರ ಪಾಟೀಲ್.—ಗುರೆಡ್ಡಿಯವರ ಪ್ರಶ್ನೆಯಲ್ಲಿ ನಹಾಯದ ವಿಚಾರವಿದೆ. ಈ ಪ್ರಶ್ನೆಯಲ್ಲಿ 4ನೇ ಯೋಜನೆಯಲ್ಲಿ ತೆಗೆದುಕೊಳ್ಳುವ ವಿಚಾರವಿದೆ.

Sri RAJA PID NAIK.—I want to know whether Siddapur site is proposed and work is going on ?

Sri VEERENDRA PATIL.—The Union Minister when he had come there suggested to State Government to investigate the Siddapur site After investigation, we have come to the conclusion that Narayanapur site is ideal.

ಶ್ರಿ ಎಸ್. ಎಂ. ಗುರೆಡ್ಡಿ.—ಈಗ ನಾರಾಯಣಪುರ ದ ಬಳಿ ಕಟ್ಟಲು ನಿರ್ಧಾರವಾಗಿದೆಯೋ ಅಥವ ಸಿದ್ದಾಪುರದ ಬಳಿ ಕಟ್ಟಲು ನಿರ್ಧಾರವಾಗಿದೆಯೋ ?

ಶ್ರಿ ವೀರೇಂದ್ರ ಪಾಟೀಲ್.—ನಾರಾಯಣಪುರದ ಹತ್ತಿರವೇ ಕಟ್ಟಬೇಕೆಂದು ನಿರ್ಣಯ ಮಾಡಲಾಗಿದೆ.

———

Development of Fishery in North and South Kanara

*Q.—290. Sri M. M. JALISATGI (Bhatkal) :—

Will the Minister for Animal Husbandry, Fisheries, Information and Publicity be pleased to state :—

(*a*) the extent of sea coast in North and South Kanara Districts (separate figures may please be furnished) ;

(*b*) the number of fishermen in North and South Kanara Districts (separate figures may please be furnished) ;

(*c*) the amount spent for the Development of Fishery in North and South Kanara Districts after integration (separate figures may please be furnished) ;

(*d*) the number of mechanised boats in North and South Kanara Districts (separate figures may please be furnished) ;

(*e*) whether they would reserve funds for the development of fishery in North Kanara District in case the amount spent by them for the said purpose during the last ten years is less ;

(*f*) the amount that will be spent during 1967-68 for the development of fishery in North Kanara District ?

A.— Sri D. DEVARAJ URS. (Minister for Animal Husbandry, Fisheries, Information and Publicity).—

	North Kanara	*South Kanara*
(*a*)	80 miles	93 miles
(*b*)	27,000	56,000
(*c*)	Rs. 79,69,700	Rs. 2,07,15,300
(*d*)	120 boats	164 boats

(*e*) No ; all along provision made for North Kanara has been considered adequate.

(*f*) Rs. 35.22 lakhs.

ಶ್ರೀ ಎಂ. ಎಂ. ಜಾಲಿನತಿಗಿ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಟ್ರೈನಿಂಗ್ ಆದವರ ಬೆನ್ನರ ನಂಬ್ಯೆ ಎಷ್ಟು ?

ಶ್ರೀ ಡಿ. ದೇವರಾಜ ಅರಸ್.—ಒಟ್ಟು 773 ಜನರು ತರಬೇತಿ ಪಡೆದಿದ್ದಾರೆ. ಅದರಲ್ಲಿ ಉತ್ತರ ಕನ್ನಡದವರು 373 ಮಂದಿ, ದಕ್ಷಿಣ ಕನ್ನಡದವರು 412 ಜನ ಇದ್ದಾರೆ.

ಶ್ರೀ ಎಂ. ಎಂ. ಜಾಲಿನತಿಗಿ.—ಅವರ ಪೈಕಿ ಎಷ್ಟು ಜನರಿಗೆ ಯಂತ್ರ ಸಜ್ಜಿತ ದೋಣಿಗಳನ್ನು ಕೊಡಲಾಗಿದೆ ?

ಶ್ರೀ ಡಿ. ದೇವರಾಜ ಅರಸ್.— ಇದುವರೆಗೆ ಎಲ್ಲರ ಬೇಡಿಕೆಯನ್ನು ಪೂರೈಸಲಾಗಿದೆ.

ಶ್ರೀ ಜಯಪ್ರಕಾಶ ನಾರಾಯಣ್.—ಬೇಕಾದಷ್ಟು ಹಣವಿರುವಾಗ ಎಲ್ಲರಿಗೂ ಕೂಡ ಏಕೆ ದೋಣಿಗಳನ್ನು ಒದಗಿಸಿರುವುದಿಲ್ಲ ?

ಶ್ರೀ ಡಿ. ದೇವರಾಜ ಅರಸ್.—ಒಬೊಬ್ಬರಿಗೆ ಒಂದೊಂದು ಕೊಡುವುದಿಲ್ಲ, 2-3-4 ಜನರನ್ನು ಸೇರಿಸಿ ಒಂದು ದೋಣಿ ಕೊಡುವುದು.

ಶ್ರೀ ಬಿ. ಭಾನ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಗೆ 1967-68ನೆಯ ಸಾಲಿಗೆ ಖರ್ಚಿಗೆ ಎಷ್ಟು ಹಣ ಒದಗಿಸಲಾಗಿದೆ ?

ಶ್ರೀ ಡಿ. ದೇವರಾಜ ಅರಸ್.—ನಾನ್-ಪ್ಲಾನ್ಡ್ ಮತ್ತು ಪ್ಲಾನ್ಡ್ ಎಕ್ಷ್‌ಪೆಂಡಿಚರ್ ಒಟ್ಟಿಗೆ ಇದೆ, ನಾನ್-ಪ್ಲಾನ್ಡ್ ಬಜೆಟ್ಟಿರುವುದು 1967-68ಕ್ಕೆ 42 ಲಕ್ಷ 60 ಸಾವಿರ ರೂಪಾಯಿ, ಪ್ಲಾನ್ಡ್ ಬಜೆಟ್ಟಿರುವುದು 60 ಲಕ್ಷ ರೂಪಾಯಿ ಸೆಂಟ್ರಲ್‌ಲೀ ಸ್ಪಾನ್ಸರ್ಡ್ ಸ್ಕೀಂ 20 ಲಕ್ಷಕ್ಕೆ ಇದೆ. ಈ ರೀತಿ ಒಟ್ಟು ಮೊತ್ತ 122 ಲಕ್ಷ ಆಗುತ್ತದೆ, ಇದರಲ್ಲಿ 35 ಲಕ್ಷ ನಾರ್ತ್ ಕೆನರಾಕ್ಕೆ ಖರ್ಚು ಮಾಡುತ್ತೇವೆ. ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಬೇರೆ ಇದೆ, ಇದರ ಜೊತೆಗೆ ಈಗ ನಾರ್ತ್ ಕೆನಾರದಲ್ಲಿರತಕ್ಕ ಕೋ ಆಪರೇಟೀವ್ಸ್ ಬೆಂಡರ್ ಏನಿದೆ ಅದಕ್ಕೆ ಕೆಲವು ದಿವಸದ ಹಿಂದೆ ಸರ್ಕಾರದವರು 45 ಲಕ್ಷ ರೂಪಾಯಿಗಳ ಗ್ಯಾರಂಟಿ ಕೊಟ್ಟು ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನ್‌ನಿಂದ ಸಾಲ ದೊರೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

ಶ್ರೀಸಿದ್ಧಯ್ಯ ಕಾಶೀಮಠ್.—ತರಬೇತಿ ಪಡೆದು ಬೆನ್ನರಿಗೆ ಈ ದೋಣಿಗಳನ್ನು ಪುಕ್ಕಟ್ಟೆಯಾಗಿ ಒದಗಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಐವು ಮ್ಯಾಕಿನೈಸ್ಡ್ ಬೋಟ್ಸ್ 35-40 ಸಾವಿರ ರೂಪಾಯಿ ಆಗುತ್ತದೆ, ಪುಕ್ಕಟೆಯಾಗಿ ಒದಗಿಸುವುದಕ್ಕಾಗುವುದಿಲ್ಲ.

ಶ್ರೀ ಎ. ಮುನಿಯಪ್ಪ.—3-4 ಜನರಿಗೆ ಒಂದು ದೋಣಿ ಕೊಡುತ್ತೀರಿ, ಇದನ್ನು ಕೊಡ ಬೇಕಾದರೆ ಸರ್ಕಾರದವರು ಅವರಿಗೆ ಹಾಕಿರುವ ಷರತ್ತು ಏನು ? ಅದಕ್ಕನುಸಾರವಾಗಿ ಎಷ್ಟು ಅರ್ಜಿಗಳು ಬಂದಿವೆ ? ಎಲ್ಲೇ ಆಗಿರುವುದು ಎಷ್ಟು ? ಪೆಂಡಿಂಗ್ ಇರುವುದು ಎಷ್ಟು ?

ಶ್ರೀ ಡಿ. ದೇವರಾಜ ಅರಸ್.—ಸುಮಾರು 600ರ ಹತ್ತಿರ ಹತ್ತಿರ ಅರ್ಜಿಗಳು ಬಂದಿದ್ದವು. ತರಬೇತಿ ಹೊಂದಿದಂತಹ ವಿದ್ಯಾರ್ಥಿಗಳಿಗೆ ಮೊದಲು ದೋಣಿಗಳನ್ನು ಕೊಡಬೇಕಾದ್ದು ನಿಯಮ, ಆ ಕಾರಣಕ್ಕಾಗಿ ಯಾರ್ಯಾರು ವಿದ್ಯಾರ್ಥಿಗಳು ತರಬೇತು ಪಡೆದು ಬಂದಿದ್ದಾರೋ ಇದುವರೆಗೂ

ಅವರೆಲ್ಲರನ್ನು ಗ್ರೂಪ್ ಮಾಡಿ ಎರಡು ಮೂರು ಜನರ ಒಂದು ಗುಂಪಿಗೆ ಒಂದೊಂದು ದೋಣಿಯಂತೆ ಕೊಟ್ಟಿದೆ. ವಿದ್ಯಾರ್ಥಿಗಳೆಲ್ಲವೆ ತರಪೇತಿ ಹೊಂದಿರತಕ್ಕ ಬೇರೆ ಮಹನೀಯರು ಕೆಲವರು ಅರ್ಜಿ ಕೊಟ್ಟಿದ್ದಾರೆ ಆ ಅರ್ಜಿ ಎಲ್ಲವನ್ನು ಪೂರೈಸುವುದಕ್ಕೆ ಈಗ ಸಧ್ಯಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—1966-67ರಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ಮೆರೈನ್ ಫಿಷ್ ಏನಿದೆ ಅದರ ಒಟ್ಟು ಉತ್ಪಾದನೆ ಏನು ?

ಶ್ರೀ ಡಿ. ದೇವರಾಜ ಅರಸ್.—ಸುಮಾರು ಒಂದು ಲಕ್ಷ ಟನ್‌ನಷ್ಟು, ಸ್ವಾಮಿ.

ಶ್ರೀ ಎಂ. ಎಂ. ಜಾಲಿಸತಿಗಿ.—1967-68ನೇ ಸಾಲಿನಲ್ಲಿ ಯಂತ್ರ ಸಜ್ಜಿತವಾದ ಎಷ್ಟು ದೋಣಿ ಗಳನ್ನು ಕೊಡುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ಈ ಸಾಲಿಗೆ ಸುಮಾರು 135 ದೋಣಿಗಳನ್ನು ಕೊಡಬೇಕೆಂದು ಯೋಚನೆಮಾಡಿಕೊಂಡಿದ್ದೇವೆ. ಅದರ ಪೈಕಿ 55 ದೋಣಿಗಳನ್ನು ನಾರ್ತ್ ಕೆನರಾಕ್ಕೆ, 80 ದೋಣಿಗಳನ್ನು ಸೌತ್ ಕೆನರಾಕ್ಕೆ ಕೊಡಬೇಕೆಂದು ಇದೆ.

ಶ್ರೀ ಕೆ.ಎಂ. ತಮ್ಮಯ್ಯ.—ಬರೀ ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಯ ಮಾನುಗಾರಿಕೆ ಅಭಿವೃದ್ಧಿಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದೀರಿ, ನಮ್ಮ ಪ್ರದೇಶದಲ್ಲಿ ಕೆರೆಗಳ ನೀರಿನಲ್ಲಿರುವ ಮೀನುಗಳನ್ನು ಮಾರಾಟಮಾಡುವ ಅಧಿಕಾರ, ಲೈಸೆನ್ಸ್ ಕೊಡುವ ಅಧಿಕಾರ ನಿಮ್ಮ ಡಿಪಾರ್ಟ್ ಮೆಂಟಿಗೆ ಇದೆ, ಅದರ ದುಡ್ಡು ನೀವು ತೆಗೆದುಕೊಳ್ಳುತ್ತಾ ಇದ್ದೀರಿ, ಅಲ್ಲಿ ಮೀನಿನ ಅಭಿವೃದ್ಧಿ ಕೆಲಸ ಏನೂ ಕಾಣುತ್ತಾ ಇಲ್ಲ. ಅದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ತರಬೇತಿಅದವರಿಗೆ ದೋಣಿ ಕೊಡಲಾಗಿದೆ ಎಂದು ಹೇಳಿದ್ದೀರಿ, ನಾವು ದೋಣಿ ತರಬೇತಿ ಪಡೆಯುತ್ತೇವೆ ಎಂದು ಬರೆದುಕೊಟ್ಟರೆ ಅಂತಹವರಿಗೂ ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅರೀತಿ ಬರೆದುಕೊಟ್ಟು ತರಬೇತಿ ಕೇಂದ್ರಗಳಲ್ಲಿ ತರಬೇತಿ ತಗೆದುಕೊಳ್ಳುವುದಾದರೆ, ಅಲ್ಲಿ ತರಬೇತಿ ಪಡೆದವರಿಗೆ ದೋಣಿಗಳನ್ನು ಕೊಡಬೇಕಾಗುತ್ತದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 164 ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ 120 ಯಂತ್ರಸಜ್ಜಿತ ದೋಣಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ, ಅದರಲ್ಲಿ ಕಾಂಗ್ರೆಸ್ ಎಕ್ಸ್ ಎಂ.ಎಲ್.ಎ. ಆಗಿದ್ದವರು ಯಾರಿಗಾದರೂ ಆ ಯಂತ್ರಚಾಲಿತ ದೋಣಿಗಳನ್ನು ಕೊಟ್ಟ ಪ್ರಕರಣ ಇದೆಯೆ ?

Mr. SPEAKER.—It is disallowed.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯೊಳಗೆ ಸುಮಾರು ಮೀನು ಹಿಡಿಯುವ ವಿಸ್ತೀರ್ಣ 80 ಮೈಲಿಗಳು ಹಾಗೂ 93 ಮೈಲಿಗಳು ಎಂದು ಹೇಳಿದ್ದೀರಿ. ಆದರೆ ಇಲ್ಲಿ ಕೊಟ್ಟಿರುವ ದೋಣಿಗಳ ಸಂಖ್ಯೆ ತೀರಾ ಕಡಿಮೆಯಾಗಿದೆ. ಇವನ್ನು ಇನ್ನೂ ಹೆಚ್ಚುಮಾಡಿ ಮೀನುಗಾರಿಕೆಯನ್ನು ಇನ್ನೂ ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ನಮಗೆ ಬಂದಿರುವ ಇಷ್ಟು ವರ್ಷಗಳ ಅನುಭವದಲ್ಲಿ ಇಲ್ಲ ಏನು ತರಬೇತಿ ಕೇಂದ್ರಗಳನ್ನು ತೆರೆದಿದ್ದೇವೆ ಆ ತರಬೇತಿ ಕೇಂದ್ರಗಳಿಗೆ ಜನರು ಬಂದು ತರಬೇತಿ ಪಡೆಯಲು ಮೊದಲು ಸ್ವಲ್ಪಮಟ್ಟಿಗೆ ಹಿಂಜರಿಯುತ್ತಿದ್ದರು ಎನ್ನುವುದು ಸರಕಾರದ ಗಮನಕ್ಕೆ ಬಂದಿದೆ. ಇತ್ತೀಚೆಗೆ ಸ್ವಲ್ಪಜನರು ಹೆಚ್ಚು ಹೆಚ್ಚಾಗಿ ತರಬೇತಿ ಪಡೆಯಲು ಮುಂದೆ ಬರುತ್ತಿದ್ದಾರೆ ತರಬೇತಿ ಹೊಂದದೇ ಇರುವವರಿಗೆ ದೋಣಿಗಳನ್ನು ಕೊಡುವುದು ಅಷ್ಟು ಸೂಕ್ತವಲ್ಲ ಎಂದು ಸರಕಾರ ಅಭಿಪ್ರಾಯ ಪಟ್ಟಿದೆ. ಹೆಚ್ಚು ಹೆಚ್ಚು ಜನರಿಗೆ ತರಬೇತಿ ಕೊಡಬೇಕೆಂದೇ ಸರಕಾರ ನಾಲ್ಕು ತರಬೇತಿ ಶಾಲೆಗಳನ್ನು ತೆರೆದಿದೆ, ಇದರಲ್ಲಿ ಮೊದಲು ಇಪ್ಪತ್ತು ಜನರಿಗೆ ಮಾತ್ರ ಜಾಗಗಳು ಇತ್ತು. ಈಗ ಅದನ್ನು ನಲವತ್ತು ಜಾಗಗಳಿಗೆ ಹೆಚ್ಚು ಮಾಡಲಾಗಿದೆ. ಈ ಸಾಲಿನಿಂದ ಇದನ್ನು ಐವತ್ತಕ್ಕೇರಿಸ ರಾಗಿದೆ. ಅಲ್ಲದೆ ತರಬೇತಿ ಕಾಲ ಕೂಡ ಮೊದಲು ಆರು ತಿಂಗಳು ಸಾಕು ಎಂದು ಇತ್ತು. ಈಚೆಗೆ ಆರು ತಿಂಗಳು ಕಾಲದ ತರಬೇತಿ ಸಾಲದು ಎಂದು ಹತ್ತು ತಿಂಗಳಕಾಲ ತರಬೇತಿ ಇದ್ದರೆ ಅನು ಕೂಲವಾಗುದೆ ಎಂದು ತರಬೇತಿ ಅವಧಿಯನ್ನು ಹೆಚ್ಚಿಸಲಾಗಿದೆ. ತರಬೇತಿ ಹೊಂದಿದ ಯುವಕರು ಗಳು ಹೆಚ್ಚು ಹೆಚ್ಚು ತರಬೇತಿ ಪಡೆದು ಬಂದೊಡನೆ ಅವರಿಗಾಗಿ ಹೆಚ್ಚು ದೋಣಿಗಳನ್ನು ಕೊಡುವ ವ್ಯವಸ್ಥೆಯನ್ನೂ ಮಾಡಲಾಗಿದೆ ಮತ್ತು ಇದರ ಬಗ್ಗೆ ಪ್ರಯತ್ನಗಳೂ ನಡೆಯುತ್ತಿವೆ.

ಶ್ರೀ ಎ. ಮುನಿಯಪ್ಪ.—ತರಬೇತಿ ಪಡೆಯುವವರಿಗೆ ದೋಣಿಗಳನ್ನು ಕೊಡುವಾಗ ಯಾವ ಆಧಾರದಮೇಲೆ ಕೊಡುತ್ತೀರೀ. ಇವರ ಜಮೀನುಗಳನ್ನು ತೆಗೆದುಕೊಳ್ಳುತ್ತೀರಾ ಇಲ್ಲವೇ ಸಾಲ್ವೆನ್ಸಿ ನೋಡುತ್ತೀರಾ ? ಹೇಗೆ ?

ಶ್ರೀ ಡಿ. ದೇವರಾಜ ಅರಸ್.—ಸೊಸೈಟಿಗಳ ಮೂಲಕ ಕೊಡುತ್ತಿರುವುದರಿಂದ ಯಾವ ಆಧಾರವನ್ನೂ ಪಡೆಯುತ್ತಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರೀ.—ಉತ್ತರ ಕನ್ನಡಕ್ಕೆ 120 ದೋಣಿಗಳು ಹಾಗೂ ದಕ್ಷಿಣ ಕನ್ನಡಕ್ಕೆ 164 ದೋಣಿಗಳು ಕೊಟ್ಟಿದೆ ಎಂದು ಹೇಳಿದ್ದೀರಿ. ಯಾರು ಯಾರಿಗೆ ಕೊಡಲಾಗಿದೆ ಎನ್ನುವವರ ಹೆಸರುಗಳನ್ನು ಕೊಡುವುದಕ್ಕಾಗುತ್ತದೆಯೆ ?

ಶ್ರೀ ಡಿ. ದೇವರಾಜ ಅರಸ್.—ಬೇರೆ ಪ್ರಶ್ನೆ ಕೇಳಿದರೆ ಆಗ ಇದರ ದೊಡ್ಡ ಪಟ್ಟಿಯನ್ನೇ ಬೇಕಾದರೆ ಓದಗಿಸಿಕೊಡುತ್ತೇನೆ.

———

Land reserved for Mohammedans in Sirsi

*Q.—210. Sri M. H. JAYAPRAKASH NARAYAN (Sirsi).—

Will the Minister for Municipal Administration be pleased to state:—

(*a*) the extent of land reserved by them in S. No. 59 and 60 of Sirsi Town to Mohammedans, a minority community, for the construction of Idga for Namaz purposes;

(*b*) whether there is a Government Order to the effect that the said reserve land should not be disposed off;

(*c*) whether they have acquirid a portion of the said reserve land to provide sites to the members of the Sirsi Horticultural Society to construct houses;

(*d*) if so, the extent thereof;

(*e*) who has disposed the acquired land and when and under which order ?

A.—Sri R. M. PATIL (Minister for Municipal Administration).—

(*a*) Two acres.

(*b*) No.

(*c*) No.

(*d*) Does not arise.

(*e*) Does not arise.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—1956ನೇ ಇಸವಿಯಲ್ಲಿ ಬೊಂಬಾಯಿ ಹಾಗೂ ಉತ್ತರ ಕನ್ನಡಜಿಲ್ಲೆ ಮೈಸೂರು ದೇಶಕ್ಕೆ ಸೇರಿದಾಗ ಅಲ್ಲಿಂದ ಕಳುಹಿಸಿದ ರಿಕಾರ್ಡುಗಳಲ್ಲಿ ಒಂಬತ್ತು ಎಕರೆಗಳಷ್ಟು ಭೂಮಿ ಮುಸ್ಲಿಮರಿಗಾಗಿ ಮೀಸಲಾಗಿಡಲಾಗಿದೆ ಎಂದು ರಿಕಾರ್ಡ್ ಆಫ್ ರೈಟ್ಸ್‌ನಲ್ಲಿದ್ದುದು ಸರಕಾರದ ಗಮನದಲ್ಲಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಆ ಪ್ರಕಾರ ಇಲ್ಲ.